**ಶ್ರೀ ಡಿ.ಎಸ್.ಅರುಣ್ ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ಇವರು ತಿರುಪತಿಯ ತಿರುಮಲದ ಬೆಟ್ಟದಲ್ಲಿ ಕರ್ನಾಟಕ ಸರ್ಕಾರದ ವತಿಯಿಂದ ಭಕ್ತಾದಿಗಳಿಗೆ ವಸತಿ ಸೌಕರ್ಯಕ್ಕಾಗಿ ಹೊಸದಾಗಿ ನಿರ್ಮಿಸುತ್ತಿರುವ ಕರ್ನಾಟಕ ಭವನದ ಕಾಮಗಾರಿ ಪ್ರಗತಿಯಲ್ಲಿದ್ದು, ಅದರ ಸದುಪಯೋಗವನ್ನು ಸಾರ್ವಜನಿಕರು ಯಾವಾಗ ಪಡೆದುಕೊಳ್ಳಬಹುದು. ಕಟ್ಟಡದ ಕಾಮಗಾರಿ ಮುಗಿದ ನಂತರ ಕರ್ನಾಟಕ ಭವನದಲ್ಲಿ ಸಾರ್ವಜನಿಕರಿಗೆ ವಸತಿ ಸೌಕರ್ಯವನ್ನು ಎಂದಿನಿಂದ ಕಲ್ಪಿಸಲು ತೀರ್ಮಾನಿಸಲಾಗಿದೆ ಎಂಬುದರ ಕುರಿತು ನಿಯಮ 72 ರಡಿ ಗಮನ ಸೆಳೆಯುವ ಸೂಚನೆಗೆ ಮಾನ್ಯ ಧಾರ್ಮಿಕ ದತ್ತಿ ಸಚಿವರ ಹೇಳಿಕೆ.**

**ಉತ್ತರ:-**

ಆಂಧ್ರಪ್ರದೇಶದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಖ್ಯೆ: 23801/2010ನ್ನು ಮಾನ್ಯ ನ್ಯಾಯಾಲಯವು ದಿನಾಂಕ:03.04.2019ರ ತೀರ್ಪಿನಲ್ಲಿ ಇತ್ಯರ್ಥ ಪಡಿಸಿರುತ್ತದೆ. ಅದರನ್ವಯ ಸರ್ಕಾರದ ಆದೇಶ ಸಂಖ್ಯೆ: ಕಂಇ 07 ಮುಲಕಾ 2020 ದಿನಾಂಕ:30.06.2020ರಲ್ಲಿ ಆಂಧ್ರಪ್ರದೇಶದ ತಿರುಮಲದಲ್ಲಿನ ಕರ್ನಾಟಕ ರಾಜ್ಯ ಛತ್ರಕ್ಕೆ ಸೇರಿದ 7.05 ಎಕರೆ ಜಾಗದಲ್ಲಿ ವಸತಿ ಗೃಹ, ಕಲ್ಯಾಣ ಮಂಟಪ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ರೂ.200-00 ಕೋಟಿಗಳ (ತೆರಿಗೆಗಳು ಹೊರತುಪಡಿಸಿದ) ವೆಚ್ಚದಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸಲು ತಿರುಮಲ-ತಿರುಪತಿ ದೇವಸ್ಥಾನ (ಟಿ.ಟಿ.ಡಿ.) ಬೋರ್ಡ್ ರವರಿಗೆ ವಹಿಸಿದ್ದು, ಇದಕ್ಕೆ ತಗಲುವ ಯೋಜನೆಯ ಅನುದಾನವನ್ನು ಟಿ.ಟಿ.ಡಿ. ಬೋರ್ಡ್‌ಗೆ ನೀಡಲು ಅನುಮತಿ ನೀಡಲಾಗಿರುತ್ತದೆ.

ಸದರಿ ಯೋಜನೆಯ ಕಾಮಗಾರಿಗಾಗಿ ಸರ್ಕಾರದ ಆದೇಶ ಸಂಖ್ಯೆ:ಕಂಇ 07 ಮುಲಕಾ 2020 ದಿನಾಂಕ:16.11.2020 ಮತ್ತು ಆದೇಶ ಸಂಖ್ಯೆ:ಕಂಇ 270 ಮುಲಬಿ 2022 ದಿನಾಂಕ:12.07.2022 ರಲ್ಲಿ ಕ್ರಮವಾಗಿ ರೂ.100-00ಕೋಟಿಗಳು ಮತ್ತು ರೂ102.00 ಕೋಟಿಗಳು ಸೇರಿ ಒಟ್ಟಾರೆ ರೂ.202.00 ಕೋಟಿಗಳನ್ನು ಕಾಮಗಾರಿಯ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ತಿರುಮಲ-ತಿರುಪತಿ ದೇವಾಲಯದ ಪ್ರಾಧಿಕಾರದವರಿಗೆ (ಟಿ.ಟಿ.ಡಿ) ಬಿಡುಗಡೆ ಮಾಡಿದ್ದು, ಸದರಿ ಯೋಜನೆಯ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಪ್ರಸ್ತಾಪಿತ ವಸತಿ ಸಂಕೀರ್ಣಗಳ ಕಾಮಗಾರಿಗಳು ಹಂತ-ಹಂತವಾಗಿ ಪೂರ್ಣಗೊಳ್ಳುತ್ತಲಿದ್ದು, ಸದರಿ ವಸತಿ ಸಂಕೀರ್ಣಗಳ ನಿರ್ಮಾಣ ಕಾರ್ಯ ಮುಕ್ತಾಯಗೊಳ್ಳುವ ಸಮಯ ಹಾಗೂ ಯಾತ್ರಾರ್ಥಿಗಳಿಗೆ ವಸತಿ ಸೌಕರ್ಯ ಕಲ್ಪಿಸಲು ಉದ್ದೇಶಿಸಿರುವ ವಿವರವನ್ನು ಈ ಕೆಳಕಂಡಂತೆ ವಿವರಿಸಿದೆ.

| ಕ್ರ. ಸಂ. | ವಸತಿ ಸಂಕೀರ್ಣದ ವಿವರ | ಒಟ್ಟು ಲಭ್ಯವಾಗುವ ಕೊಠಡಿಗಳು/ಕಲ್ಯಾಣ ಮಂಟಪ | ಕಾಮಗಾರಿ ಮುಕ್ತಾಯವಾಗುವ ದಿನಾಂಕ | ಯಾತ್ರಾರ್ಥಿಗಳಿಗೆ ವಸತಿ ವ್ಯವಸ್ಥೆ ಕಲ್ಪಿಸಲು ಉದ್ದೇಶಿಸಿರುವ ದಿನಾಂಕ |
|---|---|---|---|---|
| (1) | ವಸತಿ ಸಂಕೀರ್ಣ-1 | 132 ಕೊಠಡಿಗಳು12 ಡಾರ್ಮಿಟರಿಗಳು | ಅಕ್ಟೋಬರ್-2023 | ನವೆಂಬರ್-2023 |
| (2) | ವಸತಿ ಸಂಕೀರ್ಣ-2 | 110 ಕೊಠಡಿಗಳು | ಆಗಸ್ಟ್-2023 | ಸೆಪ್ಟೆಂಬರ್ -2023 |
| (3) | ಸೂಟ್ ಬ್ಲಾಕ್ (ಗಣ್ಯ ವ್ಯಕ್ತಿಗಳ ವಸತಿ ಸಂಕೀರ್ಣ) | 36 ಕೊಠಡಿಗಳು | ನವೆಂಬರ್ -2023 | ಡಿಸೆಂಬರ್-2023 |
| (4) | ಕಲ್ಯಾಣ ಮಂಟಪ | ಕಲ್ಯಾಣ ಮಂಟಪದ ಹಾಲ್- 500 ಜನ ಸಾಮರ್ಥ್ಯ ಡೈನಿಂಗ್ ಹಾಲ್- 250 ಜನ ಸಾಮರ್ಥ್ಯ | ಆಗಸ್ಟ್-2023 | ಸೆಪ್ಟೆಂಬರ್-2023 |
| (5) | ಕರ್ನಾಟಕ ಪ್ರವಾಸಿ ಸೌಧದ ನವೀಕರಣ ಕಾಮಗಾರಿ | 84 ಕೊಠಡಿಗಳು | ಜುಲೈ-2023 | ಆಗಸ್ಟ್-2023 |

(ಸಂಖ್ಯೆ:ಕಂಇ 81 ಮುಸಪ್ರ 2023)

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು